ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಸದ್ಯಕ್ಕೆ ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ರಾಜ್ಯದಲ್ಲಿನ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕಾ ಕಾಲೇಜುಗಳ ಸ್ಥಿತಿಗತಿಗಳನ್ನು ಅಭ್ಯಸಿಸಿ ಈ ಕಾಲೇಜುಗಳನ್ನು ಅಭಿವೃದ್ಧಿಪಡಿಸುವ ಮತ್ತು ಹೊಸ ಕಾಲೇಜುಗಳನ್ನು ತೆರೆಯುವ ಅವಶ್ಯಕತೆ ಬಗ್ಗೆ ವರದಿ ನೀಡುವ ಸಲುವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಪರಿಣಿತರ ಸಮಿತಿಯನ್ನು ರಚಿಸಲಾಗಿದೆ. ಸದರಿ ಪರಿಣಿತರ ಸಮಿತಿಯು ವರದಿಯನ್ನು ನೀಡಿದ ನಂತರ ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

ಟಿ.ಎಲ್.ಎಂ. ಉಪವಿಭಾಗ ಮತ್ತು ಶಾಖೆಗಳನ್ನು ಪ್ರಾರಂಭಿಸುವುದು

1795 (2123); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಯಪುರ ಜಿಲೆಯಲ್ಲಿ 110 ಕೆ.ವಿ. ಮತ್ತು 220 ಕೆ.ವಿ. ವಿದ್ಯುತ್ ಮಾರ್ಗಗಳ ನಿರ್ವಹಣೆಯನ್ನು ಕೇವಲ ಟಿ.ಎಲ್.ಎಂ. ಶಾಖೆ, ಬಸವನ ಬಾಗೇವಾಡಿಯಿಂದ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸ್ತುತ ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಮಾರ್ಗಗಳಲ್ಲಿ ಅಡಚಣೆಯಾದ ಸಂದರ್ಭದಲ್ಲಿ ತುರ್ತಾಗಿ ಸರಿಪಡಿಸಲು ತುಂಬ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಸಮಸ್ಯೆಗಳ ಪರಿಹಾರಕ್ಕಾಗಿ ಹೊಸದಾಗಿ ವಿಜಯಪುರದಲ್ಲಿ ಟಿ.ಎಲ್.ಎಂ. ಉಪ ವಿಭಾಗ ಮತ್ತು ಇಂಡಿ ಹಾಗೂ ವಿಜಯಪುರದಲ್ಲಿ ಟಿ.ಎಲ್.ಎಂ. ಶಾಖೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಿ ಹೊಸ ಟಿ.ಎಲ್.ಎಂ. ಉಪ ವಿಭಾಗ ಮತ್ತು ಟಿ.ಎಲ್.ಎಂ. ಶಾಖೆಗಳನ್ನು ಪ್ರಾರಂಭಿಸಲಾಗುವುದು ಹಾಗೂ ಇದಕ್ಕೆ ಬೇಕಾಗುವ ಕಾಲಮಿತಿ ಎಷ್ಟು? ವಿವರ ನೀಡುವುದು

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಮತ್ತು ಆ) ಹೌದು, ವಿಜಯಪುರ ಜಿಲ್ಲೆಯಲ್ಲಿನ ವಿದ್ಯುತ್ ಮಾರ್ಗಗಳಲ್ಲಿ ಅಡಚಣೆಯಾದ ಸಂದರ್ಭದಲ್ಲಿ ತುರ್ತಾಗಿ ಸರಿಪಡಿಸಲು ಬಾಗಲಕೋಟೆ ಮತ್ತು ಮಹಾಲಿಂಗಪುರ ಶಾಖೆಯ ಸಿಬ್ಬಂದಿಗಳನ್ನು ಉಪಯೋಗಿಸಿ ಸರಿಪಡಿಸಲಾಗುತ್ತಿದೆ.

ಇ) ಮತ್ತು ಈ) ವಿಜಯಪುರದಲ್ಲಿ ಟಿ.ಎಲ್.ಎಂ. ಉಪ ವಿಭಾಗ ಮತ್ತು ಇಂಡಿ ಹಾಗೂ ವಿಜಯಪುರದಲ್ಲಿ ಟಿ.ಎಲ್.ಎಂ. ಶಾಖೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮುಂದೆ ಇರುತ್ತದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಹಾಲಿ ಚಾಲ್ತಿಯಲ್ಲಿರುವ ವರ್ಕ್‌ಲೋಡ್ ನಾರ್ಮ್ಸ್‌ಗಳನ್ನು ಮತ್ತು ಪ್ರಸ್ತುತ ನಿಗಮದ ಆಡಳಿತ ಕಛೇರಿಗಳಿಗೆ, ವಿವಿಧ ಸಾಮರ್ಥ್ಯದ ವಿದ್ಯುತ್ ಕೇಂದ್ರಗಳಿಗೆ, ವಿಭಾಗಗಳಿಗೆ, ಉಪ ವಿಭಾಗಗಳಿಗೆ, ಶಾಖೆಗಳಿಗೆ, ಉಗ್ರಾಣಗಳಿಗೆ ಮತ್ತು ಇತರೆ ಕಛೇರಿಗಳಿಗೆ ಅವಶ್ಯವಿರುವ ಸಿಬ್ಬಂದಿ ಹುದ್ದೆಗಳ ಮತ್ತು ಹೊಸ ಕಛೇರಿಗಳ ರಚನೆಯ ವಿಷಯಗಳಲ್ಲಿ ಅಧ್ಯಯನ ಮಾಡಿ ಸಲ್ಲಿಸಿರುವ ಸಲಹೆಗಾರರ ವರದಿಯನ್ನು ಪರಿಶೀಲಿಸಲು ನಿಗಮವು ಆಂತರಿಕ ಸಮಿತಿಯನ್ನು ರಚಿಸಿರುತ್ತದೆ.

ಸದರಿ ಆಂತರಿಕ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದ್ದು, ವರದಿ ಬಂದ ನಂತರ ಪರಿಶೀಲಿಸಿ ರಾಜ್ಯಾದ್ಯಂತ ಅವಶ್ಯವಿರುವ ಕಡೆ ಹೊಸ ಕಛೇರಿಗಳನ್ನು ರಚಿಸಲು ಕ್ರಮವನ್ನು ಜರುಗಿಸಲಾಗುವುದು.

ಯಶಸ್ವಿನಿ ಯೋಜನೆಯ ಅನ್ವಯ ಪಡೆಯಲು ಚಿಕಿತ್ಸೆಯ ದರ ಏರಿಕೆ

1797 (1992); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯದಲ್ಲಿರುವ ಯಶಸ್ವಿನಿ ಕಾರ್ಡುದಾರರ ಸಂಖ್ಯೆ ಎಷ್ಟು? ಈ ಕಾರ್ಡುದಾರರಲ್ಲಿ ವಾರ್ಷಿಕ ಶೇಕಡಾ ಎಷ್ಟು ಪ್ರಮಾಣದ ಜನರು ಆಸ್ಪತ್ರೆಗಳ ಮೂಲಕ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಈ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೇ? (ಜಿಲ್ಲಾವಾರು ವಿವರ ಒದಗಿಸುವುದು)

ಆ) ಈಗ ಸರ್ಕಾರ ನಿಗಧಿಪಡಿಸಿರುವ ಶಸ್ತ್ರ ಚಿಕಿತ್ಸಾ ದರಗಳು ಕಡಿಮೆ ಎಂದು ಖಾಸಗಿ ಆಸ್ಪತ್ರೆಗಳವರು ಚಿಕಿತ್ಸೆ ನೀಡಲು ನಿರಾಕರಿಸುತ್ತಿರುವುದು ಹಾಗೂ ದರ ಹೆಚ್ಚು ಮಾಡುವಂತೆ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ರಾಜ್ಯ ಸರ್ಕಾರ ನೇಮಿಸಿದದ ತಜ್ಞರ ಸಮಿತಿ ಚಿಕಿತ್ಸಾ ದರ ಏರಿಕೆಗೆ ಶಿಫಾರಸ್ಸು ಮಾಡಿದೆಯೇ; ವಿವರಗಳನ್ನು ಒದಗಿಸುವುದು ಮತ್ತು ತಕ್ಷಣ ಪರಿಷ್ಕೃತ ದರಗಳನ್ನು ಜಾರಿಗೆ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ;

ಇ) ಯಶಸ್ವಿನಿ ಕಾರ್ಡುಗಳನ್ನು ಪಡೆಯಲು ಇನ್ನೂ ಕಾಲಾವಕಾಶ ಇದೆಯೇ; ಇಲ್ಲದಿದ್ದರೆ ಕಾಲಾವಕಾಶವನ್ನು ವಿಸ್ತರಿಸಲಾಗುವುದೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು)

ಅ) 2014–15ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಯಶಸ್ವಿನಿ ಸದಸ್ಯರುಗಳ ಗ್ರಾಮೀಣ ವಿವರಗಳನ್ನು ಅನುಬಂಧ–1 (ಅ) ರಲ್ಲಿ ಮತ್ತು ನಗರ ವಿವರಗಳನ್ನು ಅನುಬಂಧ–1 (ಆ) ರಲ್ಲಿ ನೀಡಿದೆ.